**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ ನಂಃ 340/ 2020**

| | | |
|---|---|---|
| ಸಾಕ್ಷಿಯ ಹೆಸರಃ | ಸುವರ್ಣ | ಪ್ರಾ.ಸಾಃ 01 |
| ತಂದೆ/ಗಂಡನ ಹೆಸರುಃ | ವಿನೋದಕುಮಾರ | ಚಾಸಾಃ 01 |
| ವಯಸ್ಸುಃ | 31 ವರ್ಷ | ದಿಃ 05-04-2022 |
| ಉದ್ಯೋಗಃ | ಪಿ ಎಸ್ ಐ , ಶಾಹಾಬಾದ ಪೋಲಿಸ ಠಾಣೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಶಾಹಾಬಾದ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು 03-02-2020 ರಿಂದ 16-09-202 ರವರೆಗೆ ಸೈದಾಪೂರ ಪೋಲಿಸ ಠಾಣೆಯಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 01-05-2020 ರಂದು ಮ. 1-30 ಗಂಟೆಗೆ ಸೈದಾಪೂರದ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಅನಧಿಕೃತವಾಗಿ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಅಂತಾ ಒಂದು ಖಚಿತ ಬಾತ್ಮಿ ಬಂದ ಮೇರೆಗೆ ಚಾಸಾಃ 4 ರಿಂದ 6 ರವರೊಂದಿಗೆ ಪಂಚರನ್ನು ಕರೆ ತರಲು ಹೇಳಿ ಕಳುಹಿಸಿರುತ್ತೇನೆ. ಅದರಂತೆ ಸಿಬ್ಬಂದಿಗಳು ಚಾಸಾ2 ಮತ್ತು 3 ರವರನ್ನು ಪಂಚರನ್ನಾಗಿ ಕರೆ ತಂದಿರುತ್ತಾರೆ. ನಂತರ ನಾನು ಮತ್ತು ಚಾಸಾಃ2 ರಿಂದ 6 ರವರು ನಮ್ಮ ಠಾಣಾ ಜೀಪ್‌ನಲ್ಲಿ ಬಾತ್ಮಿ ಬಂದ ಸ್ಥಳಕ್ಕೆ ಮಃ 1-40 ಗಂಟೆಗೆ ಹೋಗಿ ತಲುಪಿರುತ್ತೇವೆ. ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ಮಹಿಳೆಯು ಸಾರ್ವಜನಿಕ ಸ್ಥಳದಲ್ಲಿ ಅನಧಿಕೃತವಾಗಿ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದದ್ದನ್ನು ಕಂಡು ಬಂದಿರುತ್ತದೆ. ನಂತರ ನಾವು ದಾಳಿ ಮಾಡಲೆಂದು ಹೋದಾಗ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದ ಮಹಿಳೆ ಮತ್ತು ಕಳ್ಳಭಟ್ಟಿ ಸಾರಾಯಿ ಕೊಳ್ಳಲು ಬಂದ ಖರೀದಿದಾರರು ಓಡಿ ಹೋಗಿರುತ್ತಾರೆ. ನಂತರ ನಾವು ಸ್ಥಳ ಪರಿಶೀಲನೆ ಮಾಡಿದಾಗ ಸ್ಥಳದಲ್ಲಿ ಒಂದು ಲೀಟರನ 11 ಬಾಟಲಗಳಲ್ಲಿ ಒಟ್ಟು 11 ಲೀಟರ ಕಳ್ಳಭಟ್ಟಿ ಸಾರಾಯಿ ದೊರೆತಿರುತ್ತದೆ. ಸದರಿ ಕಳ್ಳಭಟ್ಟಿ ಸಾರಾಯಿಯನ್ನು ನಾವು ಜಪ್ತಿಪಡಿಸಿಕೊಂಡಿರುತ್ತೇವೆ. ಅವುಗಳಲ್ಲಿ ಒಂದು ಬಾಟಲ ಕಳ್ಳಭಟ್ಟಿ ಸಾರಾಯಿಯನ್ನು ಎಫ ಎಸ್ ಎಲ್ ವರದಿಗಾಗಿ ಸ್ಯಾಂಪಲ ಆಗಿ ಪಡೆದಿರುತ್ತೇನೆ. ನಂತರ ಓಡಿ ಹೋದ ಮಹಿಳೆಯ

ಹೆಸರು ಮತ್ತು ವಿಳಾಸ ವಿಚಾರಿಸಲಾಗಿ ಆಕೆಯ ಹೆಸರು ಸೋನಿಬಾಯಿ ಗಂಡ ರಾಮು ಚವಾಣ ಎಂದು ತಿಳಿದು ಬಂದಿರುತ್ತದೆ. ನಂತರ ಪಂಚರ ಸಮಕ್ಷಮ ಮದ್ಯಾಹ್ನ 1-50 ರಿಂದ 2-50 ಗಂಟೆಯವರಗೆ ಸ್ಥಳದಲ್ಲಿ ಜಪ್ತಿ ಪಂಚನಾಮೆಯನ್ನು ತಯಾರಿಸಿರುತ್ತೇನೆ. ನಂತರ ಠಾಣೆಗೆ ಬಂದು ಪಂಚನಾಮೆ ಮತ್ತು ವಶಪಡಿಸಿಕೊಂಡ ಮದ್ಯಗಳನ್ನು ಚಾಸಾಃ8 ರವರಿಗೆ ಮುಂದಿನ ಕ್ರಮಕ್ಕಾಗಿ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ-1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಜ್ಞಾಪನಾ ಪತ್ರವನ್ನು ನಿಪಿ-2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಈ ಪ್ರಕರಣದ ಮು,ಮಾಲನ್ನು ಸಾಕ್ಷಿಗೆ ತೋರಿಸಿ ಗುರುತಿಸಲು ಸರ್ಕಾರಿ ಅಭಿಯೋಜಕರು ಸಮಯಾವಕಾಶ ಕೋರಿದ್ದರಿಂದ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆಂದು ಮುಂದೂಡಲಾಯಿತು.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**